ಕರ್ನಾಟಕ ಸರ್ಕಾರ

**ಫೆಬ್ರವರಿ 01, 2018**

## ಕೇಂದ್ರ ಬಜೆಟ್ : ದೂರದರ್ಶಕತ್ವವಿಲ್ಲದ, ಗೊತ್ತು ಗುರಿ ಇಲ್ಲದ, ಬೆಳವಣಿಗೆಗೆ ಪೂರಕವಲ್ಲದ ಹಾಗೂ ಜನಪರವಲ್ಲದ ಬಜೆಟ್ ಎಂದು ಮುಖ್ಯಮಂತ್ರಿ ಬಣ್ಣನೆ

**ಬೆಂಗಳೂರು, ಫೆಬ್ರವರಿ 01:**

ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಲೋಕಸಭೆಯಲ್ಲಿ ಮಂಡಿಸಿದ 2018–19 ನೇ ಸಾಲಿನ ಕೇಂದ್ರ ಬಜೆಟ್ ದೂರದರ್ಶಕತ್ವವಿಲ್ಲದ, ಗೊತ್ತು ಗುರಿ ಇಲ್ಲದ, ಬೆಳವಣಿಗೆಗೆ ಪೂರಕವಲ್ಲದ ಹಾಗೂ ಜನಪರವಲ್ಲದ ಬಜೆಟ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಬಣ್ಣಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಕೇಂದ್ರ ಬಜೆಟ್ ಕುರಿತಂತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು ಜನರ ಬಹು ನಿರೀಕ್ಷೆಯ ನಡುವೆ ಹಾಗೂ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮಂಡಿಸಿದ ಈ ಬಜೆಟ್ ಕೇವಲ ಭರವಸೆಗಳ ಘೋಷಣೆಯಾಗಿದ್ದು, ಕಣ್ಣುಕಟ್ಟು ಕಥೆಯಂತಿದೆ. ಕೃಷಿ ವಲಯ ಸಬಲೀಕರಣಕ್ಕೆ ಹೆಸರಾಂತ ಕೃಷಿ ತಜ್ಞ ಡಾ ಎಂ. ಎಸ್. ಸ್ವಾಮಿನಾಥನ್ ಅವರ ವರದಿಯನ್ನು ಅನುಷ್ಠಾನಕ್ಕೆ ತರುವುದಾಗಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದರು. ಕೃಷಿಗೆ ಹೆಚ್ಚು ಒತ್ತು ನೀಡುತ್ತೇವೆ. ರೈತರ ಶ್ರಮಕ್ಕೆ ಒಂದೂವರೆ ಪಟ್ಟು ಪ್ರತಿಫಲ ದೊರೆಯಬೇಕು ಎಂಬ ಭರವಸೆ ಇನ್ನೂ ಭರವಸೆಯಾಗಿಯೇ ಉಳಿದಿದೆ. ಪ್ರತಿ ಕ್ವಿಂಟಾಲ್ ತೊಗರಿ ಬೇಳೆ ಖರೀದಿಗೆ 6500 ರೂ ಬೆಂಬಲ ಬೆಲೆ ಅಪೇಕ್ಷಿಸಿ ರಾಜ್ಯದ ರೈತರು ಬೇಡಿಕೆ ಇಟ್ಟಿದ್ದರು. ಆದರೆ, ಕೇಂದ್ರ ಸರ್ಕಾರ ಘೋಷಿಸಿದ್ದು ಮಾತ್ರ 5400 ರೂ ಮಾತ್ರ. ರೈತರ ಕಷ್ಟಕ್ಕೆ ಸ್ಪಂದಿಸಿದ ನಮ್ಮ ಸರ್ಕಾರ 600 ರೂ ಹೆಚ್ಚುವರಿ ಬೆಂಬಲ ಬೆಲೆ ನೀಡಿ ಪ್ರತಿ ಕ್ವಿಂಟಾಲ್ ತೊಗರಿ ಬೇಳೆಗೆ ಒಟ್ಟಾರೆ 6000 ರೂ ಬೆಂಬಲ ಬೆಲೆ ನೀಡಿ ಖರೀದಿಸಿದೆ. ತೊಗರಿ ಬೇಳೆ ಕೇವಲ ಒಂದು ನಿದರ್ಶನ. ಅನೇಕ ಬೆಳೆಗಳ ವಿಷಯದಲ್ಲೂ ಇದೇ ರೀತಿಯಾಗಿದೆ ಎಂದು ಹೇಳಿದರು.

ಕೇಂದ್ರದ ಈ ಬಜೆಟ್ ಮೇಲೆ ಜನಸಾಮಾನ್ಯರು, ವಿಶೇಷವಾಗಿ ರೈತರು ಅಪಾರ ನಿರೀಕ್ಷೆ ಹೊಂದಿದ್ದರು. ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿನ ಅಲ್ಪಾವಧಿ ಬೆಳೆ ಸಾಲ ಮನ್ನಾ ಸಂಪೂರ್ಣ ಹುಸಿಯಾಗಿದೆ. ಡಾ ಮನ್ ಮೋಹನ್ ಸಿಂಗ್ ನೇತೃತ್ವದ ಅಂದಿನ ಯು ಪಿ ಎ ಸರ್ಕಾರ 72,000 ಕೋಟಿ ರೂ ಕೃಷಿ ಸಾಲ ಮನ್ನಾ ಮಾಡಿತ್ತು ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

ಐದು ವರ್ಷಗಳ ಅಧಿಕಾರಾವಧಿಯಲ್ಲಿ ಹತ್ತು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಅದರನ್ವಯ ಕಳೆದ ನಾಲ್ಕು ವರ್ಷಗಳಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಎಂಟು ಕೋಟಿ ಉದ್ಯೋಗ ಸೃಜನೆಯಾಗಬೇಕಿತ್ತು. ಆದರೆ, ವಾಸ್ತವದಲ್ಲಿ ಪ್ರಗತಿ ಏನಾಗಿದೆ ? ಎಂದು ಪ್ರಶ್ನಿಸಿದ ಅವರು ಎಲ್ಲವೂ ಮಾತಿನಲ್ಲೇ ಅಂತ್ಯಗೊಳ್ಳುತ್ತಿದೆ ಎಂದರು.

**ಕನ್ನಡಿಯೊಳಗಿನ ಗಂಟು !**

ಕೇಂದ್ರ ಸರ್ಕಾರವು ಕಳೆದ ಬಜೆಟ್‌ನಲ್ಲಿ ಒಂದು ಲಕ್ಷ ರೂ ವಿಮಾ ರಕ್ಷಣೆ ಕಲ್ಪಿಸುವುದಾಗಿ ಘೋಷಣೆ ಮಾಡಿದ್ದ ರಾಷ್ಟ್ರೀಯ ಆರೋಗ್ಯ ವಿಮಾ ಯೋಜನೆ ಇನ್ನೂ ಜಾರಿಗೆ ಬಂದಿಲ್ಲ. ಈ ವರ್ಷ ವಿಮಾ ಮೊತ್ತವನ್ನು ಐದು ಲಕ್ಷ ರೂ ಗಳಿಗೆ ಏರಿಕೆ ಮಾಡಿದ್ದಾರೆ. ಇದೂ ಕೂಡಾ ಕನ್ನಡಿಯೊಳಗಿನ ಗಂಟು ಇದ್ದಂತೆ !

**ಮಹತ್ವಾಕಾಂಕ್ಷೀ ಘೋಷಣೆ**

2022 ರ ವೇಳೆಗೆ ಸರ್ವರಿಗೂ ವಸತಿ ಕಲ್ಪಿಸುವ ಯೋಜನೆಗೆ ಅನುದಾನ ಮೀಸಲಿರಿಸಿಲ್ಲ. ಬಜೆಟ್‌ನಲ್ಲಿ ಹಣ ಹಂಚಿಕೆ ಮಾಡದಿದ್ದರೆ ಅದು ಮಹತ್ವಾಕಾಂಕ್ಷೀ ಯೋಜನೆಯಾಗುವುದಿಲ್ಲ. ಮಹತ್ವಾಕಾಂಕ್ಷೀ ಘೋಷಣೆಯಾಗುತ್ತದೆ.

**ಸಬ್ ಅರ್ಬನ್ ರೈಲು : ರಾಜ್ಯ ಸರ್ಕಾರದ ಮೇಲೆ ಹೊರೆ**

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಮಾದರಿಯಲ್ಲೇ ವಿಶೇಷ ಉದ್ದೇಶ ವಾಹಕವನ್ನು ಸ್ಥಾಪಿಸಿ ಸಬ್ ಅರ್ಬನ್ ರೈಲು ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸಚಿವ ಸಂಪುಟ ಈಗಾಗಲೇ ಅನುಮೋದನೆ ನೀಡಿದೆ. ಈ ಯೋಜನೆಯ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತಲಾ ಶೇಕಡಾ 20 ರಷ್ಟು ಮೊತ್ತವನ್ನು ಭರಿಸಿ, ಉಳಿದ ಶೇಕಡಾ 60 ರಷ್ಟು ಮೊತ್ತವನ್ನು ಮಾರುಕಟ್ಟೆಯಲ್ಲಿ ಸಾಲ ಪಡೆಯಲು

ಯೋಜಿಸಲಾಗಿದೆ. ಈ ಮೊತ್ತದ ಹೊರೆಯೂ ಕೂಡಾ ರಾಜ್ಯ ಸರ್ಕಾರದ ಮೇಲೆಯೇ ಬೀಳುತ್ತದೆ ಎಂದು ಮುಖ್ಯಮಂತ್ರಿ ತಿಳಿಸಿದರು.

**ಸ್ವಾಗತ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಗಣಕೀಕರಿಸಿ ಆನ್‌ಲೈನ್ ವಹಿವಾಟಿಗೆ ಪ್ರೋತ್ಸಾಹಿಸುವ ನಮ್ಮ ಸರ್ಕಾರದಿಂದ ಪ್ರೇರಿತವಾಗಿದೆ. ನಮ್ಮ ಸರ್ಕಾರದ ಈ ಯೋಜನೆಯನ್ನು ಕೇಂದ್ರ ಸರ್ಕಾರವು ಅನುಕರಿಸುತ್ತಿರುವುದನ್ನು ನಾನು ಸ್ವಾಗತಿಸುತ್ತೇನೆ ಎಂದು ಸಿದ್ದರಾಮಯ್ಯ ಅವರು ನುಡಿದರು.

**ವೈದ್ಯಕೀಯ ಕಾಲೇಜು ಸ್ಥಾಪನೆ : ನಮ್ಮ ಪರಿಕಲ್ಪನೆಯ ಅನುಕರಣೆ**

ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕು ಎಂಬುದು ನಮ್ಮ ಸರ್ಕಾರದ ಪರಿಕಲ್ಪನೆ. ಪ್ರತಿ ಮೂರು ಲೋಕಸಭಾ ಕ್ಷೇತ್ರಗಳಿಗೆ ಒಂದು ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಬೇಕೆಂಬ ಕೇಂದ್ರ ಬಜೆಟ್‌ನಲ್ಲಿನ ಘೋಷಣೆ ನಮ್ಮ ಸರ್ಕಾರದ ಪರಿಕಲ್ಪನೆಯ ಅನುಕರಣೆ. ರಾಜ್ಯದಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದ ಈವರೆಗೆ 13 ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದೇವೆ. ಯು ಪಿ ಎ ಸರ್ಕಾರದ ಅಧಿಕಾರಾವಧಿಯಲ್ಲಿ ಬೆಂಗಳೂರು ಮತ್ತು ಕಲಬುರಗಿಯಲ್ಲಿ ಇ ಎಸ್ ಐ ನ ಎರಡು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿದೆ.

**ಹಣಕಾಸು ನಿರ್ವಹಣೆಯಲ್ಲಿ ವಿಫಲ**

ಕಳೆದ 2016–17 ಸಾಲಿನಲ್ಲಿ ಹಣಕಾಸು ಕೊರತೆಯನ್ನು ಶೇಕಡಾ 3.3 ಗೆ ಇಳಿಸುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ಅಂತೆಯೇ, 2017–18 ನೇ ಸಾಲಿನಲ್ಲೂ ಈ ಭರವಸೆ ಸಾಕಾರಗೊಳ್ಳಲಿಲ್ಲ. ಆರ್ಥಿಕ ಕೊರತೆ ಶೇಕಡಾ 3.5 ರಲ್ಲೇ ಮುಂದುವರೆದಿದೆ. ಕೇಂದ್ರ ಸರ್ಕಾರವು ಹಣಕಾಸು ನಿರ್ವಹಣೆಯಲ್ಲಿ ವಿಫಲವಾಗಿದೆ ಎಂಬುದಕ್ಕೆ ಇದು ಸಾಕ್ಷಿ ಎಂದು ಮುಖ್ಯಮಂತ್ರಿ ವಿವರಿಸಿದರು.

ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಕುಸಿತ ಕಂಡರೂ, ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕಡಿತಗೊಳಿಸಿ ಅದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲ.

**ವಿಶೇಷ ಕೊಡುಗೆ ಇಲ್ಲ**

ಒಂದೇ ಮಾತಿನಲ್ಲಿ ಬಣ್ಣಿಸಬಹುದಾದರೆ, ಕೇಂದ್ರ ಸರ್ಕಾರದ 2018–19 ನೇ ಸಾಲಿನ ಬಜೆಟ್ ರಾಜ್ಯಕ್ಕೆ ಯಾವುದೇ ವಿಶೇಷ ಕೊಡುಗೆ ನೀಡಿಲ್ಲ. ಬಂಡವಾಳಷಾಹಿಗಳ ಪರವಾಗಿ ಮಂಡಿಸಿರುವ ಬಜೆಟ್ ಇದಾಗಿದೆ ಎಂದರು.

**ಅಚ್ಚೇದಿನ್ ಯಾವಾಗ ?**

ಹಾಗಾದರೆ, ಅಚ್ಚೇದಿನ್ ಯಾವಾಗ ? ಎಂಬ ಮಾಧ್ಯಮ ಮಿತ್ರರೋರ್ವರ ಪ್ರಶ್ನೆಗೆ ಅಚ್ಚೇ ದಿನ್ ಕಬೀ ನಹೀ ಆಯೇಗಾ ? ಎಂದು ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿದರು.

**ಆಯೋಗದ ಶಿಫಾರಸ್ಸುಗಳು ಆಯವ್ಯಯದಲ್ಲಿ ಮಂಡನೆ**

ಹಿರಿಯ ಐ ಎ ಎಸ್ ಅಧಿಕಾರಿ ಎಂ ಆರ್ ಶ್ರೀನಿವಾಸ ಮೂರ್ತಿ ಅವರು ಸಲ್ಲಿಸಿರುವ ಆರನೇ ವೇತನ ಆಯೋಗದ ವರದಿಯಲ್ಲಿ ಸಲ್ಲಿಕೆಯಾಗಿರುವ ಶಿಫಾರಸ್ಸುಗಳನ್ನು ಸನ್ನಿಹಿತ ಸಂಪುಟ ಸಭೆಯಲ್ಲಿ ಚರ್ಚಿಸಿ, ಫೆಬ್ರವರಿ 16 ರಂದು ತಾವು ಮಂಡಿಸಲಿರುವ 2018–19 ನೇ ಸಾಲಿನ ರಾಜ್ಯ ಆಯವ್ಯದಲ್ಲಿ ಅವುಗಳನ್ನು ಅಳವಡಿಸಿ ಅನುಷ್ಠಾನಕ್ಕೆ ತರಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಮುಖ್ಯಮಂತ್ರಿ ಉತ್ತರಿಸಿದರು.

********

ಡಿ ಪಿ ಎಂ